ಕರ್ನಾಟಕ ಸರ್ಕಾರ

ನೋಂದಣಿ ಮತ್ತು ಮುದ್ರಾಂಕಗಳ ಇಲಾಖೆ

ಸಂಖ್ಯೆ:ಆರ್.ಜಿ.ಎನ್. 108/2013-14

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಕಂದಾಯ ಭವನ, 8ನೇ ಮಹಡಿ,
ಕೆ.ಜಿ.ರಸ್ತೆ, ಬೆಂಗಳೂರು-09
ದಿನಾಂಕ: 05-10-2013.

ಸುತ್ತೋಲೆ

ವಿಷಯ: ಗೃಹ ನಿರ್ಮಾಣ ಸಹಕಾರ ಸಂಘಗಳ ವತಿಯಿಂದ ಸದಸ್ಯರಿಗೆ ನಿವೇಶನ ಹಂಚಿಕೆಯಲ್ಲಿ ಮುದ್ರಾಂಕ ಶುಲ್ಕ ವಂಚನೆ ಮಾಡುತ್ತಿರುವುದನ್ನು ತಪಾಸಣೆ ಮಾಡುವ ಕುರಿತು.

******

ರಾಜ್ಯದಲ್ಲಿ ಹಲವಾರು ಗೃಹ ನಿರ್ಮಾಣ ಸಹಕಾರ ಸಂಘಗಳು ಅಸ್ಥಿತ್ವದಲ್ಲಿದ್ದು, ಈ ಸಂಘಗಳು ತಮ್ಮ ಸದಸ್ಯರುಗಳಿಗಾಗಿ ನಿವೇಶನ ನೀಡಲು ಕೃಷಿ ಜಮೀನುಗಳನ್ನು ಖರೀದಿ ಮಾಡಲು ಭೂ ಸುಧಾರಣೆ ಕಾಯ್ದೆಯಲ್ಲಿ ಅವಕಾಶವಿಲ್ಲದಿರುವುದರಿಂದ ಭೂ ಮಾಲೀಕರ ಮತ್ತು ಬಡಾವಣೆ ಅಭಿವೃದ್ಧಿದಾರರ ಜೊತೆಗೆ ಒಪ್ಪಂದಗಳನ್ನು ಮಾಡಿಕೊಂಡು, ಭೂ ಪರಿವರ್ತನೆ ಮತ್ತು ಅಭಿವೃದ್ಧಿಯಾದ ನಂತರ, ಸದರಿ ಭೂ ಮಾಲೀಕರು ಮತ್ತು ಅಭಿವೃದ್ಧಿದಾರರಿಂದ ಕ್ರಯದ ದಸ್ತಾವೇಜುಗಳನ್ನು ನೋಂದಣಿ ಮಾಡಿಸುವಾಗ ಕಾರರು ಒಪ್ಪಂದದಲ್ಲಿ ಭೂ ಮಾಲೀಕರಿಗೆ ಮತ್ತು ಅಭಿವೃದ್ಧಿದಾರರಿಗೆ ಪಾವತಿ ಮಾಡಿರುವ ಮೊತ್ತವನ್ನು ಮರೆಮಾಚಿ ಪ್ರಚಲಿತ ಮಾರ್ಗಸೂಚಿ ಬೆಲೆಗೆ ಅನುಗುಣವಾಗಿ ಬೆಲೆ ನಮೂದಿಸಿ ಮುದ್ರಾಂಕ ಶುಲ್ಕ ವಂಚನೆ ಮಾಡುತ್ತಿರುವುದರ ಬಗ್ಗೆ ದೂರುಗಳ ಮೂಲಕ ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ಜಿಲ್ಲಾ ನೋಂದಣಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಉಪನೋಂದಣಿ ಕಛೇರಿಗಳನ್ನು Suo-moto ತಪಾಸಣೆ ನಡೆಸಿ, 2 ವರ್ಷದೊಳಗಿದ್ದಲ್ಲಿ ಕರ್ನಾಟಕ ಮುದ್ರಾಂಕ ಕಾಯ್ದೆ, 1957 ರ ಕಲಂ 45 (ಎ) ರಡಿಯಲ್ಲಿ ಅಥವಾ 2 ವರ್ಷದ ಅವಧಿ ಮೀರಿದಲ್ಲಿ ಕಲಂ 46 (ಎ) ರಲ್ಲಿ ಪ್ರಕರಣ ದಾಖಲಿಸಿಕೊಳ್ಳುವುದು. ದಸ್ತಾವೇಜಿನಲ್ಲಿ ಮುದ್ರಾಂಕ ಶುಲ್ಕ ಆಕರಣೆಗಾಗಿ ನೀಡಬೇಕಾದ ಎಲ್ಲಾ ಮಾಹಿತಿಗಳನ್ನು ಮರೆಮಾಚದೇ ನಮೂದಿಸಿರುವ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಕ್ರಮಕೈಗೊಳ್ಳಲು ಆದೇಶಿಸಿದೆ.

ಉಪನೋಂದಣಾಧಿಕಾರಿಗಳು ದಸ್ತಾವೇಜುಗಳನ್ನು ಸರಿಯಾಗಿ ಪರಿಶೀಲಿಸದೇ ನೋಂದಣಿ ಮಾಡಿ ಸರ್ಕಾರದ ರಾಜಸ್ವ ಸೋರಿಕೆಯಾಗಲು ಕಾರಣ ಕರ್ತರಾದವರಿಂದ ಆದ ರಾಜಸ್ವ ನಷ್ಟವನ್ನು ವಸೂಲಿ ಮಾಡಲು ಕ್ರಮಕೈಗೊಳ್ಳಲು ಮತ್ತು ಅವರ ಮೇಲೆ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಲು ಈ ಮೂಲಕ ಸೂಚಿಸಿದೆ.

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು
ಬೆಂಗಳೂರು

ಗೆ,

ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ

ಪ್ರತಿಯನ್ನು:- ರಾಜ್ಯದ ಎಲ್ಲಾ ಉಪ ನೋಂದಣಾಧಿಕಾರಿಗಳಿಗೆ